## ಕರ್ನಾಟಕ ಸರ್ಕಾರದ ನಡವಳಿಗಳು

***ವಿಷಯ:-*** ಶ್ರೀ ಹೆಚ್.ಕಟ್ಟಿಮನಿ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಕೊಪ್ಪಳ ಮತ್ತು ಇತರರ ವಿರುದ್ಧ ಆರೋಪಗಳಿಗೆ ಸಂಬಂಧಿಸಿದಂತೆ ಮಾನ್ಯ ಉಪಲೋಕಾಯುಕ್ತ-1ರವರ ತನಿಖೆ, ಕಲಂ 12(3) ರ ವರದಿ, ಪ್ರಕರಣವನ್ನು ವಿವರವಾದ ಇಲಾಖೆ ವಿಚಾರಣೆಗೆ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ-ಆದೇಶ.

***ಓದಲಾಗಿದೆ***

| | |
|---|---|
| *1.* | ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪ.ಸಂಖ್ಯೆ: ಕಂಪ್ಲೇಟ್/ ಉಪಲೋಕ್/ಜಿಎಲ್‌ಬಿ-2900/2016/ ಎಆರ್‌ಇ-5, ದಿನಾಂಕ:24.4.2017. |
| *2.* | ಮಾನ್ಯ ಉಪ ಲೋಕಾಯುಕ್ತರವರ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ವರದಿ ಸಂಖ್ಯೆ: ಅ.ಸ.ಪ.ಸಂಖ್ಯೆ: ಕಂಪ್ಲೇಟ್/ ಉಪಲೋಕ್/ಜಿಎಲ್‌ಬಿ-2900/2016/ ಎಆರ್‌ಇ-5, ದಿನಾಂಕ:17.4.2017. |

***ಪ್ರಸ್ತಾವನೆ:-***

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ **ದಿನಾಂಕ:24.4.2017** ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪ ಲೋಕಾಯುಕ್ತ-1ರವರ ದಿನಾಂಕ:17.4.2017 ರ ಲೋಕಾಯುಕ್ತ ಕಾಯ್ದೆಯ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಶಿವಕುಮಾರ ನಾಯಕ ತಂದೆ ಟಿ.ಸಿ.ನಾಯಕ ವಾರ್ಡ್ ನಂ, 30, ಅಣ್ಣೂರು ಗೌರಮ್ಮ ಕ್ಯಾಂಪ್, ಗಂಗಾವತಿ ಇವರು ಲೋಕಾಯುಕ್ತ ಕಛೇರಿಗೆ ದೂರು ಸಲ್ಲಿಸಿ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಕೇಸಕ್ಕಿ ಹಂಚಿನಾಳ ಕ್ಯಾಂಪ್ ನಿಂದ ಟಿ.-04 (ಮಸರಿ ಕ್ಯಾಂಪ್) ರಸ್ತೆ ಕಾಮಗಾರಿಯನ್ನು ನಿರ್ವಹಿಸಿದೇ ರೂ. 1.90 ಕ್ಷೋಟಿ ಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಇದಕ್ಕೆ (1) ಶ್ರೀ ಹೆಚ್.ಕಟ್ಟಿಮನಿ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಕೊಪ್ಪಳ (2) ಮನೋಹರ ವಡ್ಡರ್, ಅಂದಿನ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಕೊಪ್ಪಳ (3) ಕೃಷ್ಣಮೂರ್ತಿ ಸಹಾಯಕ ಇಂಜಿನಿಯರ್, ಯೋಜನಾ ಉಪವಿಭಾಗ, ಕೊಪ್ಪಳ ಮತ್ತು (4) ಎಂ.ಬಿ.ದಾನರೆಡ್ಡಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಯೋಜನಾ ಉಪ ಉಪ ವಿಭಾಗ, ಕೊಪ್ಪಳ ಹೊಣೆಗಾರರಾಗಿರುತ್ತಾರೆಂದು ಅವರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಸದರಿ ದೂರಿನ ಕುರಿತು ಮಾನ್ಯ ಉಪಲೋಕಾಯುಕ್ತರು, ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೊಪ್ಪಳ ಇವರಿಂದ ವರದಿ ಪಡೆದಿರುತ್ತಾರೆ. ಸದರಿ ವರದಿಯಲ್ಲಿ ದೂರುದಾರರು ಆರೋಪಿಸಿರುವಂತೆ ಯಾವುದೇ ಹಣ ದುರುಪಯೋಗವಾಗಿರುವ ಆರೋಪವು ವಿಚಾರಣೆ ಕಾಲಕ್ಕೆ ಸಾಭೀತಾಗಿರುವುದಿಲ್ಲವೆಂದು ತಿಳಿಸಿ, ವರದಿ ಸಲ್ಲಿಸಿರುತ್ತಾರೆ. ದೂರಿನ ವಿಷಯವಾಗಿ ಮಾನ್ಯ ಉಪಲೋಕಾಯುಕ್ತರು ನಾಲ್ಕು ಮಂದಿಯಿಂದ ವಿವರಣೆ ಪಡೆದಿದ್ದು, ಅವರುಗಳು ಆರೋಪಗಳನ್ನು ನಿರಾಕರಿಸಿ, ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ.

---2

ಮಾನ್ಯ ಉಪಲೋಕಾಯುಕ್ತರು ತನಿಖಾ ಸಂದರ್ಭದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಿ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಪೇಸ್-2, ಪ್ಯಾಕೇಜ್ ಸಂಖ್ಯೆ:ಕೆ.ಎಸ್.20-04 ರಲ್ಲಿ 9 ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಗುತ್ತಿಗೆದಾರರಾದ ಶ್ರೀ ಅಮರಗುಂಡಪ್ಪ ಇವರಿಗೆ ರೂ.1169.24 ಲಕ್ಷಗಳಿಗೆ ಟೆಂಡರ್ ಅನುಮೊದನೆಯಾಗಿದ್ದು, ಸದರಿ ಟೆಂಡರ್‌ನಲ್ಲಿ ಕೇಸಕ್ಕಿ ಹಂಚಿನಾಳ ಕ್ಯಾಂಪ್ ನಿಂದ ಟಿ.-04 ರವರಗೆ 6.43 ಕೀ.ಮೀ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು (ಅಂದಾಜು ವೆಚ್ಚ ರೂ.2,51,70,000) ಕೈಗೊಂಡಿದ್ದು, ಕೆಲಸ ಪ್ರಾರಂಭಿಸಿದ ಅವಧಿಯಲ್ಲಿ ರಸ್ತೆಯ ಅಕ್ಕಪಕ್ಕದ ಜಮೀನಿನ ಮಾಲೀಕರು ರಸ್ತೆಯ ಅಗಲೀಕರಣಗೊಳಿಸುವುದನ್ನು ಆಕ್ಷೇಪಿಸಿ, ಕಾಮಗಾರಿಗೆ ತಡೆಯೊಡ್ಡಿರುತ್ತಾರೆಂಬ ಕಾರಣಗಳನ್ನು ನೀಡಿ, ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈ ಬಿಟ್ಟಿರುತ್ತಾರೆಂದು, ಸದರಿ ಕಾಮಗಾರಿಯ ಬದಲಿಗೆ ಜಮಾಪುರ ದಿಂದ ಟಿ-01, (3.3.0 ಕೀ.ಮಿ) (ಸಿದ್ದಪುರ - ನಂದಿಹಳ್ಳಿ ರೋಡ್) ಮತ್ತು ಗುಂಡೂರು ಕ್ಯಾಂಪ್ ನಿಂದ ಗುಂಡೂರು ಕ್ರಾಸ್‌ವರಗೆ (3.30 ಕೀ.ಮೀ) ರಸ್ತೆಯನ್ನು ಅಭಿವೃದ್ಧಿ ಪಡಿಸಲು ನಿಯಮಗಳನ್ನು ಉಲ್ಲಂಘಿಸಿ, ಟೆಂಡರ್ ಕಾಮಗಾರಿಗಳನ್ನು ಬದಲಾವಣೆ ಮಾಡಲು ಅವಕಾಶ ಇಲ್ಲದಿದ್ದರು ಪ್ರಸ್ತಾವನೆಯನ್ನು ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ ಇವರಿಗೆ ಸಲ್ಲಿಸಿ, ಬದಲಿ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ಪಡೆದು ಕಾಮಗಾರಿಯನ್ನು ನಿರ್ವಹಿಸಿರುತ್ತಾರೆಂದು ತಿಳಿಸಿರುತ್ತಾರೆ. ಈ ರೀತಿ ಬದಲಿ ಕಾಮಗಾರಿಗಳಿಗೆ ಸಂಬಂಧಿಸಿದ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಕಾಯಾರ್ಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ ಇವರಿಂದ ಪಡೆದಿರುವುದಿಲ್ಲವೆಂದು ಹಾಗೂ ಬದಲಾಯಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡಿರುವುದಿಲ್ಲವೆಂದು, ಈ ರೀತಿ ನಾಲ್ಕು ಆರೋಪಿತರು ಸರ್ಕಾರಿ ನೌಕರರಾಗಿದ್ದು, ಅವರ ಕರ್ತವ್ಯದಲ್ಲಿ ಪೂರ್ಣ ಪ್ರಮಾಣದ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1)ನ್ನು ಉಲ್ಲಂಘಿಸಿರುತ್ತಾರೆಂದು, ಅವರು ನೀಡಿರುವ ಹೇಳಿಕೆಗಳು ಶಿಸ್ತು ನಡವಳಿಯನ್ನು ಕೈ ಬಿಡಲು ಸೂಕ್ತ ಹಾಗೂ ಸಮಾಧಾನಕರವಾಗಿರುವುದಿಲ್ಲವೆಂದು ತಿಳಿಸಿ, ಸದರಿ ನಾಲ್ಕು ಆರೋಪಿತರ ವಿರುದ್ಧ ವಿವರವಾದ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 14-ಎ ರ ಅನುಸಾರ ವಿವರವಾದ ಇಲಾಖೆ ವಿಚಾರಣೆಯನ್ನು ಕೈಗೊಳ್ಳಲು ತಮಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತ-1 ರವರು ಸರ್ಕಾರವನ್ನು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ಕಲಂ 12(3) ರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿರುತ್ತದೆ. ಟೆಂಡರ್ ಕಾಮಗಾರಿಗಳನ್ನು ಬದಲಾಯಿಸಲು ಅವಕಾಶ ಇಲ್ಲದಿದ್ದರು ಕೇಸಕ್ಕಿ ಹಂಚಿನಾಳ ಕ್ಯಾಂಪ್ ನಿಂದ ಟಿ-04 ರವರಗೆ 6.43 ಕೀ.ಮೀ ರಸ್ತೆ ಅಭಿವೃದಿ ಕಾಮಗಾರಿಯನ್ನು ಬದಲಾಯಿಸಲು ಹಾಗೂ ಜಮಾಪುರ ದಿಂದ ಟಿ-01, (3.30 ಕೀ.ಮಿ) (ಸಿದ್ದಪುರ - ನಂದಿಹಳ್ಳಿ ರೋಡ್) ಮತ್ತು ಗುಂಡೂರು ಕ್ಯಾಂಪ್ ನಿಂದ ಗುಂಡೂರು ಕ್ರಾಸ್‌ವರಗೆ (3.30 ಕೀ.ಮೀ) ರಸ್ತೆಯನ್ನು ಅಭಿವೃದ್ಧಿ ಪಡಿಸಲು ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ ಇವರಿಗೆ ಪ್ರಸ್ತಾವನೆ ಸಲ್ಲಿಸಲು ಯೋಜನಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಆದ ಶ್ರೀ ಹುಲುಗಪ್ಪ ಕಟ್ಟಿಮನಿ ಮತ್ತು ಮನೋಹರ ವಡ್ಡರ್ ಹಾಗೂ ಉಪವಿಭಾಗ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆದ

---3

ಎಂ.ಬಿ.ದಾನರೆಡ್ಡಿ ಮತ್ತು ಎಸ್.ಕೃಷ್ಣಮೂರ್ತಿ ಸಹಾಯಕ ಇಂಜಿನಿಯರ್‌ಗಳು ಕಾರಣರಾಗಿರುವುದು ದಾಖಲೆಗಳಿಂದ ಕಂಡು ಬರುತ್ತದೆ.

ಅಲ್ಲದೆ, ಬದಲಾಯಿಸಿ, ಕೈಗೊಳ್ಳಲಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಪಾದಿತರು ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ ಇವರಿಂದ ಪಡೆಯದೆ ಇರುವುದು ಹಾಗೂ ಬದಲಾಯಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಳ್ಳದೆ ಇರುವ ಲೋಪಗಳು ಪ್ರಸಕ್ತ ಪ್ರಕರಣದಲ್ಲಿ ಕಂಡು ಬಂದಿರುತ್ತದೆ. ನಾಲ್ಕು ಮಂದಿ ಆರೋಪಿತರು ಸರ್ಕಾರಿ ನೌಕರರರಾಗಿದ್ದು, ಬೃಹತ್ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ನಿಯಮಗಳನ್ನು ಕಡೆಗಣಿಸಿ, ಅವರ ವಿವೇಚನೆಯ ಅನುಸಾರ ಕಾಮಗಾರಿ ಕೈಗೊಳ್ಳಲು ಶಿಫಾರಸ್ಸು ಮಾಡಿರುವುದು ಅದರಂತೆ ಅನುಮೋದನೆ ಪಡೆದು ಕಾಮಗಾರಿಯನ್ನು ನಿರ್ವಹಿಸಿರುವುದು ಕಂಡು ಬಂದಿರುತ್ತದೆ. ಈ ರೀತಿಯಾಗಿ ಅಪಾದಿತರು ಅವರ ಕರ್ತವ್ಯದಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. (1) ಮನೋಹರ ವಡ್ಡರ್, ಹಿಂದಿನ ಕಾರ್ಯಪಾಲಕ ಇಂಜಿನಿಯರ್ (2) ಎಸ್.ಕೃಷ್ಣಮೂರ್ತಿ ಹಿಂದಿನ ಸಹಾಯಕ ಇಂಜಿನಿಯರ್ (3) ಹೆಚ್. ಕಟ್ಟಿಮನಿ ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಮತ್ತು (4) ಶ್ರೀ ಎಂ.ಬಿ.ದಾನರೆಡ್ಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖೆ ವಿಚಾರಣೆಯನ್ನು ಕ.ನಾ.ಸೇ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರಡಿ ನಡೆಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ, ಈ ಆದೇಶ.

## ಆದೇಶ ಸಂಖ್ಯೆ:ಗ್ರಾಅಪ 48 ಇಎನ್‌ಕ್ಯೂ 17, ಬೆಂಗಳೂರು, ದಿನಾಂಕ:18.05.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಂ.ಬಿ.ದಾನರೆಡ್ಡಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ), ಯೋಜನಾ ಉಪ ವಿಭಾಗ, ಕೊಪ್ಪಳ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ಮತ್ತು 11ಎ ಅನುಸಾರ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 214 (2) (ಬಿ) (1) ರನ್ವಯ ಮಂಜೂರಾತಿ ನೀಡಿದೆ. ಶ್ರೀ ಎಂ.ಬಿ.ದಾನರೆಡ್ಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರನ್ನು ಒಳಗೊಂಡಂತೆ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ವಿವರವಾದ ಇಲಾಖೆ ವಿಚಾರಣೆಯನ್ನು ಕ.ನಾ.ಸೇ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರ ಅನುಸಾರ ನಡೆಸುವ ಸಲುವಾಗಿ ಪ್ರಕರಣವನ್ನು ನಿಯಮ 14(ಎ) ರಡಿ ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸಿದೆ.

1. ಶ್ರೀ ಹೆಚ್.ಕಟ್ಟಿಮನಿ, ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಕೊಪ್ಪಳ.
2. ಮನೋಹರ ವಡ್ಡರ್, ಅಂದಿನ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಕೊಪ್ಪಳ.

3. ಎಂ.ಕೃಷ್ಣಮೂರ್ತಿ ಸಹಾಯಕ ಇಂಜಿನಿಯರ್, ಯೋಜನಾ ಉಪವಿಭಾಗ, ಕೊಪ್ಪಳ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

18/05/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-5, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ. ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ. ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
9. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ. ಬೆಂಗಳೂರು ಇವರ ಮುಖಾಂತರ)
10. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
11. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ ಮತ್ತು ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು
12. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ಹೆಚ್ಚುವರಿ ಪ್ರತಿ.